KACM710004522021

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

ಉಪಸ್ಥಿತರು

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **20** ನೇ ಜುಲೈ **2026**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 315/2021**

ಫಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ-

ಆರೋಪಿ/ತರು ಃ

ರಾಕೇಶನಾಯ್ಕ ಬಿನ್ ರಾಮಾನಾಯ್ಕ, 26 ವರ್ಷ, ವ್ಯವಸಾಯಗಾರರು, ವಾಸ ಃ ಕರಕುಚ್ಚಿ ತಾಂಡ್ಯ ಗ್ರಾಮ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಕೆ.ಪ್ರವೀಶ್, ನ್ಯಾಯವಾದಿಗಳು.)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 11.04.2020 |
| 2 | ಅಪರಾಧ ವರದಿ ಮಾಡಿದ ದಿನಾಂಕ | 11.04.2020 |
| 3 | ಆರೋಪಿ/ತರನ್ನು ಬಂಧಿಸಿದ ದಿನಾಂಕ | -- |
| 4 | ಫಿರ್ಯಾದಿಯ ಹೆಸರು | ರಘುನಾಥ.ಎಸ್.ವಿ., ಪಿ.ಎಸ್.ಐ. |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 12.08.2025 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 07.07.2026 |

Visit **ecourts.gov.in** for updates or download mobile app "**eCourts Services**" from Android or iOS

KACM710004522021

| | | |
|---|---|---|
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ 379 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರಪರಾಧಿ |

****

ತೀರ್ಪು

ಲಕ್ಕವಳ್ಳಿ ಆರಕ್ಷಕ ಉಪನಿರೀಕ್ಷಕರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-

ದಿನಾಂಕ 11.04.2020 ರಂದು ಮಧ್ಯಾಹ್ನ 11.00 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ಆರೋಪಿಯು ಯಾವುದೇ ಪರವಾನಿಗೆಯನ್ನು ಪಡೆಯದೇ ಮತ್ತು ಸರ್ಕಾರಕ್ಕೆ ರಾಜಧನವನ್ನು ಪಾವತಿಸದೇ ಕರಕುಚ್ಚಿ ಗ್ರಾಮದ ಮೋಹನಕುಮಾರರವರ ಅಡಿಕೆ ತೋಟದ ಬಳಿ ಭದ್ರಾ ಹೊಳೆಯಿಂದ ಅಕ್ರಮವಾಗಿ ಕಳ್ಳತನದಿಂದ ರೂ.2,625/- ಬೆಲೆಯ ಮರಳನ್ನು ತೆಗೆದು ಮಾರಾಟ ಮಾಡುವ ಉದ್ದೇಶದಿಂದ ಪಿಕಪ್ ವಾಹನ ಸಂಖ್ಯೆ ಕೆಎಃ18/ಎ-8498 ರಲ್ಲಿ ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದು, ಆದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣವು ತನಿಖಾ ಹಂತದಲ್ಲಿರುವಾಗ ಆರೋಪಿಯು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ತನಿಖಾಧಿಕಾರಿಯು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಯು

Visit **ecourts.gov.in** for updates or download mobile app "**eCourts Services**" from Android or iOS

ನ್ಯಾಯಾಲಯದ ಸಮನ್ಸ್ ಪಡೆದು ನ್ಯಾಯಾಲಯದ ಮುಂದೆ ಹಾಜರಾಗಿದ್ದು, ಆರೋಪಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಭಾರತೀಯ ದಂಡ ಪಕ್ರಿಯಾ ಸಂಹಿತೆ ಕಲಂ 207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 379 ರಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ರಚಿಸಲಾಯಿತು. ಆರೋಪಿಯು ಆರೋಪಣೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ಸಾಕ್ಷಿದಾರರ ಪಟ್ಟಿಯಲ್ಲಿ ತೋರಿಸಿರುವ 12 ಸಾಕ್ಷಿದಾರರಲ್ಲಿ ಅಸಾ-1 ರಿಂದ 5 ರವರ ಸಾಕ್ಷ್ಯ ಮಾಡಿಸಿರುತ್ತಾರೆ ಹಾಗೂ 12 ದಾಖಲೆಗಳನ್ನು ಹಾಜರುಪಡಿಸಿ ನಿಪಿ-1 ರಿಂದ 12 ಎಂದು ಗುರ್ತಿಸಿಕೊಂಡಿರುತ್ತಾರೆ.

5. ಅಭಿಯೋಜನೆ ಪರ ಸಾಕ್ಷಿದಾರರ ವಿಚಾರಣೆ ಮುಕ್ತಾಯಗೊಂಡ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿಯು ತನ್ನ ವಿರುದ್ಧದ ಹೇಳಿಕೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಅವರ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಗುರ್ತಿಸಿಕೊಂಡಿರುವುದಿಲ್ಲ.

6. ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾನೆ.

7. ಆರೋಪಿಯ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

Visit **ecourts.gov.in** for updates or download mobile app "**eCourts Services**" from Android or iOS

1) ದಿನಾಂಕ 11.04.2020 ರಂದು ಮಧ್ಯಾಹ್ನ 11.00 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನಲ್ಲಿ ಆರೋಪಿಯು ಯಾವುದೇ ಪರವಾನಿಗೆಯನ್ನು ಪಡೆಯದೇ ಮತ್ತು ಸರ್ಕಾರಕ್ಕೆ ರಾಜಧನವನ್ನು ಪಾವತಿಸದೇ ಕರಕುಚ್ಚಿ ಗ್ರಾಮದ ಮೋಹನಕುಮಾರರವರ ಅಡಿಕೆ ತೋಟದ ಬಳಿ ಭದ್ರಾ ಹೊಳೆಯಿಂದ ಅಕ್ರಮವಾಗಿ ಕಳ್ಳತನದಿಂದ ರೂ.2,625/- ಬೆಲೆಯ ಮರಳನ್ನು ತೆಗೆದು ಮಾರಾಟ ಮಾಡುವ ಉದ್ದೇಶದಿಂದ ಪಿಕಪ್ ವಾಹನ ಸಂಖ್ಯೆ ಕೆಎ:18/ಎ-8498 ರಲ್ಲಿ ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 379 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

2) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತವೆ ಃ

ಅಂಶ-1 ಃ ನಕಾರಾತ್ಮಕವಾಗಿ,

ಅಂಶ-2 ಃ ಅಂತಿಮ ಆದೇಶದಂತೆ,

-ಃ ಕಾ ರ ಣ ಗ ಳು ಃ-

10. ಅಂಶ-**1** ಃ. ಅಭಿಯೋಜನೆಯು ಆರೋಪಿಯ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಪ್ರಕರಣದ ಪಿರ್ಯಾದುದಾರರು ಸಾಕ್ಷಿದಾರರಾದ ಚಾಸಾ-1/ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 11.04.2020 ರಂದು ಬೆಳಿಗ್ಗೆ 10.00 ಗಂಟೆಗೆ ತಾನು ಠಾಣೆಯಲ್ಲಿರುವಾಗ ಚಾಸಾ-9 ರವರು ಕರೆ ಮಾಡಿ ಕರಕುಚ್ಚಿ ತಾಂಡ್ಯದ ರಾಮನಾಯ್ಕರವರ ತೋಟದ ಬಳಿ ಇರುವ ಭದ್ರಾ ಹೊಳೆಯಲ್ಲಿ ರಾಕೇಶ್ ನಾಯ್ಕ ಎಂಬುವವರು ಅಕ್ರಮವಾಗಿ ಮರಳು ತೆಗೆದು ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದ ಮೇರೆಗೆ ಚಾಸಾ-5 ರಿಂದ 8 ರವರು ಕರೆದುಕೊಂಡು ಇಲಾಖಾ ಜೀಪಿನಲ್ಲಿ 10.10 ಕ್ಕೆ ಠಾಣೆಯನ್ನು ಬಿಟ್ಟು 10.40 ಕ್ಕೆ ಕರಕುಚ್ಚಿ ತಾಂಡ್ಯದ ಬಸ್ ನಿಲ್ದಾಣಕ್ಕೆ ಹೋಗಿದ್ದು, ಚಾಸಾ-9 ರವರು ಅಲ್ಲಿ ಇದ್ದ ಪಂಚರಾದ ಠ್ಯಾಕ್ರನಾಯ್ಕ ಮತ್ತು ಆಕರ್ಷರವರನ್ನು

KACM710004522021

ಕರೆದುಕೊಂಡು ಬಂದಿದ್ದು ಅವರಿಗೆ ನೋಟೀಸ್ ಜಾರಿ ಮಾಡಿ ವಿಚಾರವನ್ನು ತಿಳಿಸಿದ್ದು, 10.50 ಕ್ಕೆ ಅಲ್ಲಿಂದ ಹೊರಟು 11.00 ಗಂಟೆ ಸಮಯಕ್ಕೆ ಮೋಹನ್ ಕುಮಾರ್ ರವರ ತೋಟದ ಹತ್ತಿರ ಹೋಗುತ್ತಿರುವಾಗ ತಮ್ಮ ಎದುರುಗಡೆ ಒಂದು ಪಿಕ್‌ಅಪ್ ವಾಹನ ಬಂದಿದ್ದು, ತಮ್ಮ ಇಲಾಖಾ ಜೀಪನ್ನು ನೋಡಿ ಸದರಿ ವಾಹವನ್ನು ನಿಲ್ಲಿಸಿ ಆರೋಪಿ ಓಡಿ ಹೋಗಿದ್ದು, ನಂತರ ಪಂಚರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಕೆಎ18/ಎ-8498 ನೋಂದಣಿ ಸಂಖ್ಯೆ ಆಗಿದ್ದು, ಅದರ ತುಂಬಾ ಮರಳು ತುಂಬಿರುವುದು ಕಂಡುಬಂದಿದ್ದು, ನಂತರ ಓಡಿ ಹೋದವನ ಹೆಸರು, ವಿಳಾಸವನ್ನು ಪಂಚರಿಗೆ ಕೇಳಲಾಗಿ ರಾಕೇಶ್‌ನಾಯ್ಕ ಬಿನ್ ರಾಮನಾಯ್ಕ, ಕರಕುಚ್ಚಿ ತಾಂಡ್ಯ ಎಂದು ತಿಳಿಸಿದ್ದು, ನಂತರ ಚಾಸಾ-6 ರವರಿಂದ 11.15 ರಿಂದ 11.30 ರವರೆಗೆ ಸ್ಥಳದಲ್ಲಿ ವರದಿಯನ್ನು ತಯಾರಿಸಿ, ಠಾಣೆಗೆ ಕಳುಹಿಸಿದ್ದು, ಚಾಸಾ-10 ರವರು ಕರೆ ಮಾಡಿ ಪ್ರಕರಣ ದಾಖಲಾದ ಬಗ್ಗೆ 12.15 ಕ್ಕೆ ಮಾಹಿತಿ ನೀಡಿದ್ದು, ನಂತರ ಪಂಚರ ಸಮಕ್ಷಮ 12.15 ರಿಂದ 01.15 ರವರೆಗೆ ಅಮಾನತ್ತು ಮಹಜರು ಮಾಡಿಕೊಂಡು 02.00 ಗಂಟೆಯ ಸಮಯಕ್ಕೆ ಮಾಲು ಸಮೇತ ಠಾಣೆಗೆ ಬಂದಿದ್ದು, ಅಮಾನತ್ತು ಪಡಿಸಿಕೊಂಡ ಮಾಲನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ನಂತರ ಚಾಸಾ-5 ರಿಂದ 9 ಮತ್ತು ಪಂಚರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ದಿನಾಂಕ 13.04.2020 ರಂದು ಕಾರ್ಯಪಾಲಕ ಅಭಿಯಂತರರು ರವರಿಗೆ ಮರಳಿನ ಮೌಲ್ಯದ ಬಗ್ಗೆ ವರದಿ ನೀಡುವಂತೆ ಮನವಿ ಪತ್ರ ನೀಡಿರುತ್ತೇನೆ, ಅದೇ ದಿನ ಗಣಿ ಮತ್ತು ಭೂ ವಿಜ್ಞಾನ ನಿರ್ದೇಶಕರಿಗೆ ಆರೋಪಿಯ ವಿರುದ್ಧ ಸಿಆರ್.ಪಿ.ಸಿ. ಕಲಂ 200 ರೀತ್ಯಾ ಪ್ರಕರಣ ದಾಖಲಿಸುವಂತೆ ಮನವಿ ಸಲ್ಲಿಸಿರುತ್ತೇನೆ, ನಂತರ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ತರೀಕೆರೆ ಇವರಿಗೆ ಮರಳು ತೆಗೆದ ಜಾಗದ ದಾಖಲೆಯನ್ನು ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ, ನಂತರ ದಿನಾಂಕ 20.05.2020 ರಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-11 ರವರಿಗೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಅಸಾ-1 ರವರನ್ನು ಪಾಟೀ ಸವಾಲಿಗೆ

ಒಳಪಡಿಸಿದಾಗ ಅಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿ ಪರ ವಕೀಲರ ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

11. ಚಾಸಾ-2/ಅಸಾ-2 ಮತ್ತು ಚಾಸಾ-3/ಅಸಾ-3 ರವರು ಪ್ರಸ್ತುತ ಪ್ರಕರಣದಲ್ಲಿ ದಿನಾಂಕ 11.04.2020 ರಂದು ಕೃತ್ಯ ನಡೆದ ಸ್ಥಳದಲ್ಲಿ ನಡೆಸಿದ ಮರಳು ಮತ್ತು ವಾಹನದ ಅಮಾನತ್ತು ಹಾಗೂ ದಿನಾಂಕ 24.05.2020 ರಂದು ಆರೋಪಿಯು ಮರಳು ತೆಗೆದ ಸ್ಥಳವನ್ನು ತೋರಿಸಿದ ಸ್ಥಳದಲ್ಲಿ ಜರುಗಿಸಿದ ಮಹಜರಿಗೆ ಮಹಜರು ಸಾಕ್ಷಿದಾರರು ಎಂದು ದೋಷಾರೋಪಣಾ ಪತ್ರದಲ್ಲಿ ನಮೂದಿಸಿದ್ದು, ಆದರೆ ನಿಪಿ-2 ರಂತೆ ಜರುಗಿಸಿದ ಅಮಾನತ್ತು ಮಹಜರನ್ನು ಗಮನಿಸಿದಾಗ ಸದರಿಯವರು ನಿಪಿ-2 ರ ಮಹಜರಿನ ಸಾಕ್ಷಿದಾರರಾಗಿರುವುದಿಲ್ಲ ಹಾಗೂ ಸದರಿಯವರು ನಿಪಿ-9 ರಂತೆ ಜರುಗಿಸಿದ ಮರಳು ತೆಗೆದ ಸ್ಥಳವನ್ನು ತೋರಿಸಿದ ಸ್ಥಳದಲ್ಲಿ ಜರುಗಿಸಿದ ಮಹಜರಿಗೆ ಸಾಕ್ಷಿದಾರರಾಗಿದ್ದು, ಅಸಾ-2 ಮತ್ತು 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ತಾವು ಕರಕುಚ್ಚಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿರುವುದಿಲ್ಲ, ತಮ್ಮ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿದ್ದು, ಅಸಾ-2 ಮತ್ತು 3 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ದಿನಾಂಕ 24.05.2020 ರಂದು ಮಧ್ಯಾಹ್ನ 12.00 ರಿಂದ 01.00 ಗಂಟೆಯವರೆಗೆ ಕರಕುಚ್ಚಿ ಗ್ರಾಮದ ಭದ್ರಾ ಹೊಳೆ ಪಕ್ಕದಲ್ಲಿರುವ ಸಂತೋಷ್‌ನಾಯ್ಕರವರ ಅಡಿಕೆ ತೋಟದ ಹತ್ತಿರ ಕೆಎ:18/ಎ-8498 ರ ಬುಲೆರೋ ಪಿಕ್‌ಅಪ್ ವಾಹನದಲ್ಲಿ ಆರೋಪಿಯು ಅಕ್ರಮವಾಗಿ ಮರಳು ದಾಸ್ತಾನು ಮಾಡಿದ ವಿಚಾರವಾಗಿ ಪೊಲೀಸರು ಮಾಡಿದ ಮಹಜರಿಗೆ

Visit ecourts.gov.in for updates or download mobile app "eCourts Services" from Android or iOS

KACM710004522021

ತಾವು ಸಹಿ ಮಾಡಿರುತ್ತೇವೆ ಎಂದರೆ ವಿಚಾರ ತಮಗೆ ತಿಳಿದಿರುವುದಿಲ್ಲ, ಆದರೆ ಸಹಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ.

12. ಚಾಸಾ-7/ಅಸಾ-4 ರವರು ಅಸಾ-1 ರವರು ನಡೆಸಿದ ದಾಳಿಗೆ ಸಹಕರಿಸಿದ ಬಗ್ಗೆ ಸಾಕ್ಷಿದಾರರಾಗಿದ್ದು, ಸದರಿಯವರು ಅಸಾ-1 ರವರ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಅಸಾ-4 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಅಸಾ-4 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿ ಪರ ವಕೀಲರ ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

13. ಚಾಸಾ-4 ರವರು ನೀಡಿದ ವರದಿಯನ್ನು ಸ್ವೀಕರಿಸಿ ತನಿಖೆಯನ್ನು ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ತನಿಖಾಧಿಕಾರಿಗಳಾದ ಚಾಸಾ-12/ಅಸಾ-5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 06.07.2020 ರಂದು ಚಾಸಾ-4 ರವರು ನೀಡಿದ ವರದಿಯನ್ನು ಸ್ವೀಕರಿಸಿ, ನಂತರ ಈ ಪ್ರಕರಣದಲ್ಲಿ ಆರೋಪಿಯ ಮೇಲೆ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಅಸಾ-5 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಅಸಾ-5 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿ ಪರ ವಕೀಲರ ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

14. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿರುವ ಎಲ್ಲಾ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯ ಪ್ರಕಾರ ದಿನಾಂಕ 11.04.2020 ರಂದು ಮಧ್ಯಾಹ್ನ 11.00 ಗಂಟೆ ಸಮಯದಲ್ಲಿ ಆರೋಪಿಯು ಯಾವುದೇ ಪರವಾನಿಗೆಯನ್ನು ಪಡೆಯದೇ ಮತ್ತು ಸರ್ಕಾರಕ್ಕೆ ರಾಜಧನವನ್ನು ಪಾವತಿಸದೇ ಕರಕುಚ್ಚಿ ಗ್ರಾಮದ ಮೋಹನಕುಮಾರರವರ ಅಡಿಕೆ ತೋಟದ ಬಳಿ ಭದ್ರಾ ಹೊಳೆಯಿಂದ ಅಕ್ರಮವಾಗಿ ಕಳ್ಳತನದಿಂದ ರೂ.2,625/-

Visit **ecourts.gov.in** for updates or download mobile app "**eCourts Services**" from Android or iOS

ಬೆಲೆಯ ಮರಳನ್ನು ತೆಗೆದು ಮಾರಾಟ ಮಾಡುವ ಉದ್ದೇಶದಿಂದ ಪಿಕಪ್ ವಾಹನ ಸಂಖ್ಯೆ ಕೆಎ:18/ಎ-8498 ರಲ್ಲಿ ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದರು ಎಂಬುದಾಗಿರುತ್ತದೆ. ಸಾಮಾನ್ಯವಾಗಿ ಕಳ್ಳತನ ಪ್ರಕರಣಗಳಲ್ಲಿ ಅಭಿಯೋಜನೆಯು ಅಮಾನತ್ತು ಮಹಜರನ್ನು ನಿಸ್ಸಂಶಯವಾಗಿ ರುಜುವಾತು ಪಡಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯವರ ಪ್ರಕಾರ ಮರಳು ತುಂಬಿದ ಬುಲೇರೋ ಪಿಕಪ್ ವಾಹನ ಮತ್ತು ಅದರಲ್ಲಿದ್ದ ಮರಳನ್ನು ಅಮಾನತ್ತು ಪಡಿಸಿಕೊಂಡ ಸ್ಥಳದಲ್ಲಿ ನಿಪಿ-2 ರಂತೆ ಅಮಾನತ್ತು ಮಹಜರನ್ನು ಜರುಗಿಸಿರುತ್ತಾರೆ ಎಂಬುದಾಗಿರುತ್ತದೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ ನಿಪಿ-2 ರ ಪ್ರಕಾರ ಠಾಕ್ರನಾಯ್ಕ ಮತ್ತು ಆಕರ್ಷರವರು ನಿಪಿ-2 ರ ಅಮಾನತ್ತು ಮಹಜರು ಸಾಕ್ಷಿದಾರರಾಗಿರುತ್ತಾರೆ, ಆದರೆ ನಿಪಿ-2 ರಂತೆ ಜರುಗಿಸಿದ ಅಮಾನತ್ತು ಮಹಜರಿನ ಸಾಕ್ಷಿದಾರರಾದ ಠಾಕ್ರನಾಯ್ಕ ಮತ್ತು ಆಕರ್ಷರವರನ್ನು ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿ ಸದರಿಯವರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ. ಸದರಿ ಅಂಶವು ನಿಪಿ-2 ರಂತೆ ಜರುಗಿಸಿದ ಮಹಜರು ಬಗ್ಗೆ ಹಾಗೂ ಅಭಿಯೋಜನೆಯ ಪ್ರಕರಣದ ಬಗ್ಗೆ ಸಂಶಯವನ್ನುಂಟು ಮಾಡುತ್ತದೆ.

15. ಅಸಾ-2 ಮತ್ತು 3 ರವರು ನಿಪಿ-9 ರಂತೆ ಜರುಗಿಸಿದ ಮರಳು ತೆಗೆದ ಸ್ಥಳದ ಸ್ಥಳ ಮಹಜರು ಸಾಕ್ಷಿದಾರರಾಗಿದ್ದು ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ತಾವು ಕರಕುಚ್ಚಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿರುವುದಿಲ್ಲ, ತಮ್ಮ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿದ್ದು, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಸಾ-2 ಮತ್ತು 3 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ತಾವು ಪೊಲೀಸರು ನಿಪಿ-9 ರಂತೆ ಮಾಡಿದ ಮಹಜರಿಗೆ ಸಹಿ

Visit **ecourts.gov.in** for updates or download mobile app "**eCourts Services**" from Android or iOS

ಮಾಡಿದ್ದು ಅದರಲ್ಲಿ ಬರೆದ ವಿಚಾರ ತಮಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-2 ಮತ್ತು 3 ರವರ ಸಾಕ್ಷ್ಯದ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನ ಅಂಶಗಳನ್ನು ಗಮನಿಸಿದಾಗ ಸದರಿಯವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿರದೆ ಅನೇಕ ದ್ವಂದ್ವತೆಗಳಿಂದ ಕೂಡಿರುತ್ತದೆ. ಆದ್ದರಿಂದ ಈ ಪ್ರಕರಣದಲ್ಲಿ ಅಭಿಯೋಜನೆಯು ನಿಪಿ-9 ರ ಮಹಜರನ್ನು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ ಎಂದು ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ.

16. ಅಸಾ-1 ರವರು ಪ್ರಕರಣದ ಪಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ತಮಗೆ ಬಂದ ಮಾಹಿತಿ ಮೇರೆಗೆ ದಾಳಿ ನಡೆಸಿ, ಎತ್ತಿನ ಗಾಡಿ ಮತ್ತು ಮರಳನ್ನು ಅಮಾನತ್ತು ಪಡಿಸಿಕೊಂಡು, ಮಹಜರು ಕ್ರಮ ಜರುಗಿಸಿ, ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲು ಮಾಡಿ, ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿ, ಭಾಗಶಃ ತನಿಖೆಯನ್ನು ಕೈಗೊಂಡ ಬಗ್ಗೆ ಸಾಕ್ಷ್ಯ ನುಡಿದಿದ್ದು, ಇಲ್ಲಿ ಪ್ರಮುಖವಾಗಿ ಪರಿಗಣಿಸಬೇಕಾದ ಅಂಶವೇನೆಂದರೆ ಅಸಾ-1 ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ತಮಗೆ ಬಂದ ಮಾಹಿತಿ ಮೇರೆಗೆ ತಾನು ಮತ್ತು ಚಾಸಾ-5 ರಿಂದ 8 ರವರು ಇಲಾಖಾ ಜೀಪಿನಲ್ಲಿ ಹೊರಟು ಪಂಚರಾದ ಠಾಕ್ರನಾಯ್ಕ ಮತ್ತು ಆಕರ್ಷರವರಿಗೆ ನೋಟೀಸು ನೀಡಿ, 10.50 ಕ್ಕೆ ಅಲ್ಲಿಂದ ಹೊರಟು 11.00 ಗಂಟೆ ಸಮಯಕ್ಕೆ ಮೋಹನ್ ಕುಮಾರ್ ರವರ ತೋಟದ ಹತ್ತಿರ ಹೋಗುತ್ತಿರುವಾಗ ತಮ್ಮ ಎದುರುಗಡೆ ಒಂದು ಪಿಕ್ ಅಪ್ ವಾಹನ ಬಂದಿದ್ದು, ತಮ್ಮ ಇಲಾಖಾ ಜೀಪನ್ನು ನೋಡಿ ಸದರಿ ವಾಹವನ್ನು ನಿಲ್ಲಿಸಿ ಆರೋಪಿ ಓಡಿ ಹೋಗಿದ್ದು, ನಂತರ ಪಂಚರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಕೆಎಃ18/ಎ-8498 ನೋಂದಣಿ ಸಂಖ್ಯೆ ಆಗಿದ್ದು, ಅದರ ತುಂಬಾ ಮರಳು ತುಂಬಿರುವುದು ಕಂಡುಬಂದಿದ್ದು, ನಂತರ ಓಡಿ ಹೋದವನ ಹೆಸರು, ವಿಳಾಸವನ್ನು ಪಂಚರಿಗೆ ಕೇಳಲಾಗಿ ರಾಕೇಶ್‌ನಾಯ್ಕ ಬಿನ್ ರಾಮನಾಯ್ಕ, ಕರಕುಚ್ಚಿ ತಾಂಡ್ಯ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಮೇಲೆ ಚರ್ಚಿಸಿದಂತೆ ನಿಪಿ-2 ರಂತೆ ಜರುಗಿಸಿದ ಮರಳು ಮತ್ತು ವಾಹನ

Visit **ecourts.gov.in** for updates or download mobile app "**eCourts Services**" from Android or iOS

ಅಮಾನತ್ತು ಮಹಜರಿನ ಮಹಜರು ಸಾಕ್ಷಿದಾರರಾದ ಠಾಕ್ರನಾಯ್ಕ ಮತ್ತು ಆಕರ್ಷರವರನ್ನು ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿ ಸದರಿಯವರನ್ನು ವಿಚಾರಣೆಗೆ ಒಳಪಡಿಸದೆ ಇರುವುದು ಅಭಿಯೋಜನೆಯ ಪ್ರಕರಣದ ಬಗ್ಗೆ ಸಂಶಯವನ್ನುಂಟು ಮಾಡುತ್ತದೆ. ಇನ್ನೂ ಮುಖ್ಯವಾದ ಅಂಶವೇನೆಂದರೆ ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಗಳು ಆರೋಪಿಯೇ ಭದ್ರಾ ಹೊಳೆಯಿಂದ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ಮರಳನ್ನು ಕಳವು ಮಾಡಿ ಎತ್ತಿನ ಗಾಡಿಯಲ್ಲಿ ತುಂಬಿಕೊಂಡು ಬಂದಿರುವ ಬಗ್ಗೆ ನೋಡಿರುವ ಯಾವುದೇ ಪ್ರತ್ಯಕ್ಷ ಸಾಕ್ಷಿದಾರರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಹಾಗೂ ನಿಪಿ-9 ರ ಸ್ಥಳ ಮಹಜರು ಸಾಕ್ಷಿದಾರರಾದ ಅಸಾ-2 ಮತ್ತು 3 ರವರು ಮೇಲೆ ಚರ್ಚಿಸಿದ ಕಾರಣಗಳಿಂದಾಗಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಅಂಶಗಳು ಅಭಿಯೋಜನೆಯ ಪ್ರಕರಣಕ್ಕೆ ಭಾರಿ ಹಿನ್ನಡೆಯನ್ನುಂಟು ಮಾಡುತ್ತದೆ.

17. ಅಸಾ-4 ರವರು ಅಸಾ-1 ರವರು ನಡೆಸಿದ ದಾಳಿಗೆ ಸಹಕರಿಸಿದ ಬಗ್ಗೆ ಸಾಕ್ಷ್ಯ ನುಡಿದಿದ್ದು, ಅಸಾ-5 ರವರು ಪ್ರಕರಣದಲ್ಲಿ ಭಾಗಶಃ ತನಿಖೆಯನ್ನು ಕೈಗೊಂಡು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಅಸಾ-1, 4 ಮತ್ತು 5 ರವರು ಸರ್ಕಾರಿ ಅಧಿಕಾರಿಗಳಾಗಿದ್ದು, ಅಸಾ-2 ಮತ್ತು 3 ರವರ ಸಾಕ್ಷ್ಯವು ಅಸಾ-1, 4 ಮತ್ತು 5 ರವರ ಸಾಕ್ಷ್ಯಕ್ಕೆ ಪೂರಕವಾಗಿರುವುದಿಲ್ಲ ಮತ್ತು ಅನೇಕ ದ್ವಂದ್ವತೆಗಳಿಂದ ಕೂಡಿರುತ್ತದೆ. ಕಾರಣ, ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಿದ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿನ ಒಳಾಂಶಗಳನ್ನು ನಿಸ್ಸಂಶಯತೀತವಾಗಿ ಸಾಬೀತು ಪಡಿಸಲು ವಿಫಲವಾಗಿರುತ್ತಾರೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಆರೋಪಿಯು ಬಿಡುಗಡೆಗೆ ಅರ್ಹರೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಅಂಶ-1 ನ್ನು ನಕಾರಾತ್ಮಕ ಎಂದು ಉತ್ತರಿಸಿರುತ್ತೇನೆ.

Visit **ecourts.gov.in** for updates or download mobile app "**eCourts Services**" from Android or iOS

KACM710004522021

18. <u>ಅಂಶ - **2** ಃ</u> ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

-ಃ <u>ಆದೇಶ</u> ಃ-

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿಯ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ .

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರೆಗೆ ಊರ್ಜಿತವಾಗಿರುತ್ತದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 20 ನೇ ಜುಲೈ 2026 ರಂದು ಘೋಷಿಸಲಾಯಿತು)

ಸಹಿ

**(ಊರ್ಮಿಳ.ವಿ)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

<u>ಅನುಬಂಧ</u>

<u>ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

| | | |
|---|---|---|
| ಅಸಾ-1 | ಃ | ರಘುನಾಥ್.ಎಸ್.ವಿ. |
| ಅಸಾ-2 | ಃ | ಅಶೋಕ |
| ಅಸಾ-3 | ಃ | ರಾಜ.ಕೆ.ಎಸ್. |
| ಅಸಾ-4 | ಃ | ಅಣ್ಣಯ್ಯ.ಎಂ.ಹೆಚ್. |
| ಅಸಾ-5 | ಃ | ಶ್ರೀಮತಿ ಮೇಘ.ಟಿ.ಎನ್. |

Visit **ecourts.gov.in** for updates or download mobile app "**eCourts Services**" from Android or iOS

KACM710004522021

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

| | | |
|---|---|---|
| ನಿಪಿ-1 | ಃ | ವರದಿ/ದೂರು |
| ನಿಪಿ-2 | ಃ | ಅಮಾನತ್ತು ಮಹಜರು |
| ನಿಪಿ-3 | ಃ | ಪಂಚರಿಗೆ ನೀಡಿದ ನೋಟೀಸ್ |
| ನಿಪಿ-4, 5 | ಃ | 2 ಛಾಯಚಿತ್ರಗಳು |
| ನಿಪಿ-6 | ಃ | ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಬರೆದ ಮನವಿ ಪತ್ರ |
| ನಿಪಿ-7 | ಃ | ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳಿಗೆ ಬರೆದ ಪತ್ರ ದಿನಾಂಕ 13.04.2020 |
| ನಿಪಿ-8 | ಃ | ಭೂದಾಖಲೆಗಳು ಸಹಾಯಕ ನಿರ್ದೇಶಕರಿಗೆ ಬರೆದ ಮನವಿ ಪತ್ರ |
| ನಿಪಿ-9 | ಃ | ಸ್ಥಳ ಮಹಜರು |
| ನಿಪಿ-10 | ಃ | ಛಾಯಚಿತ್ರ |
| ನಿಪಿ-11 | ಃ | ಸಾಕ್ಷ್ಯತ್ವ ಅಧಿನಿಯ ಕಲಂ 65(ಬಿ) ರೀತ್ಯಾ ಧೃಡೀಕರಣ ಪತ್ರ |
| ನಿಪಿ-12 | ಃ | ಸಹಾಯಕ ಕಾರ್ಯಪಾಲಕ ಅಭಿಯಂತರರು ನೀಡಿದ ವರದಿ |

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು ಃ-</u>

- ಇಲ್ಲ -

<u>ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

- ಇಲ್ಲ -

<u>ಆರೋಪಿ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

- ಇಲ್ಲ -

ಸಹಿ

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app "**eCourts Services**" from Android or iOS